ಒ.ಎಸ್. ನಂ.78/2022
ಪಿಡಬ್ಲು-1

ದಿನಾಂಕ 15.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಶಾಲಾ ದಾಖಲಾತಿಗಳ ಪ್ರಕಾರ 3ನೆ ಪ್ರತಿವಾದಿ ನನ್ನ ತಾಯಿಗಿಂತ ವಯಸ್ಸಿನಲ್ಲಿ 21-ವರ್ಷ ದೊಡ್ಡವರು ಎಂದರೆ ಸರಿಯಲ್ಲ. 2 ಮತ್ತು 3ನೆ ಪ್ರತಿವಾದಿಯರ ಶಾಲಾ ದಾಖಲಾತಿಗಳು ಸರಿಯಾಗಿರುತ್ತವೆ ಎಂದರೆ ಸರಿಯಲ್ಲ. ಶಾಲಾ ದಾಖಲಾತಿಗಳ ಪ್ರಕಾರ 4ನೆ ಪ್ರತಿವಾದಿ ನನಗಿಂತ 18-ವರ್ಷ ದೊಡ್ಡವರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶಾಲಾ ದಾಖಲೆಗಳಲ್ಲಿ ತಪ್ಪಾಗಿ ಬರೆದಿರುತ್ತಾರೆ ಎಂದು ಹೇಳುತ್ತಾರೆ. ಶಾಲಾ ದಾಖಲಾತಿಗಳ ಪ್ರಕಾರ 2ನೆ ವಾದಿಯು 4ನೆ ಪ್ರತಿವಾದಿಗಿಂತ 24-ವರ್ಷ ಚಿಕ್ಕವಳು ಎಂದರೆ ನನಗೆ ಗೊತ್ತಿಲ್ಲ. 3ನೆ ಪ್ರತಿವಾದಿ 1ನೆ ಪ್ರತಿವಾದಿಯ ಕಾನೂನುಬದ್ಧ ಹೆಂಡತಿ ಎಂದರೆ ಸರಿಯಲ್ಲ. ನನ್ನ ತಾಯಿ ಮೊದಲನೆ ಹೆಂಡತಿ ಎಂದು ತೋರಿಸಲು ಯಾವುದೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. 3ನೆ ಪ್ರತಿವಾದಿಯ ಮದುವೆ 1ನೆ ಪ್ರತಿವಾದಿಯೊಂದಿಗೆ ಆದ 15-ವರ್ಷಗಳ ನಂತರ ನನ್ನ ತಾಯಿ 1ನೆ ಪ್ರತಿವಾದಿಯ ಮನೆಗೆ ಬಂದಿರುತ್ತಾಳೆ ಎಂದರೆ ಸರಿಯಲ್ಲ. ನಿಂಗಮ್ಮ ಮೊದಲನೆ ಜೀವಂತ ಇರುವಾಗಲೆ 1ನೆ ಪ್ರತಿವಾದಿಯು ಸಂಗಮ್ಮಳೊಂದಿಗೆ ಮದುವೆಯಾಗಿದ್ದು ಸದರಿ ಸಂಗಮ್ಮ 1ನೆ ಪ್ರತಿವಾದಿಯ ಕಾನೂನುಬದ್ಧ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ನಾವು ಒಂದನೆ ಹೆಂಡತಿಯ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಂಗಮ್ಮಳೆ 1ನೆ ಪ್ರತಿವಾದಿಯ ಮೊದಲು ಹೆಂಡತಿಯಿದ್ದು ಅವರಿಗೆ ಭಾಗಮ್ಮ ಮತ್ತು ಬೋರಮ್ಮ ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿಯಲ್ಲ. ನಾನಾಗಲಿ, ನನ್ನ ಸಹೋದರಿಗಾಗಲಿ ಮತ್ತು ನನ್ನ ತಾಯಿಗಾಗಲಿ ದಾವಾ ಸ್ವತ್ತಿನಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾಸ್ತಿಯ ಮಂದೆವಾಲದ ಹೆದ್ದಾರಿ ರಸ್ತೆಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ದಾವಾಸ್ತಿಯಲ್ಲಿ ನಿವೇಶನಗಳು ಆಗಿವೆ ಎಂದರೆ ಸರಿ. ದಾವಾಸ್ತಿಯ ಪ್ರತಿ ಎಕರೆಗೆ 12 ಲಕ್ಷ ಬೆಲೆ ಇರಬಹುದು. 1995 ರಲ್ಲಿ 1ನೆ ಪ್ರತಿವಾದಿ ತನ್ನ ಪ್ರಾಪಂಚಿಕ ಅಡಚಣೆಗಾಗಿ 7ನೆ ಪ್ರತಿವಾದಿಗೆ 07-ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು, ನನ್ನ ತಂಗಿ ಮತ್ತು ನನ್ನ ತಾಯಿ ತಕರಾರು ಮಾಡಿಲ್ಲ ಎಂದರೆ ಸಾಕ್ಷಿ 1ನೆ ಪ್ರತಿವಾದಿ ನಮಗೆ ಗೊತ್ತಾಗದಂತೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. 1998 ರಲ್ಲಿ ಸಾತವೀರವ್ವ ಗಂಡ ಶಿವರಾಯ ಚಿಟಗಿರವರಿಗೆ 1ನೆ ಪ್ರತಿವಾದಿ ತನ್ನ ಪ್ರಾಪಂಚಿಕ ಅಡಚಣೆಗಾಗಿ 03-ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ

ಸಮಯದಲ್ಲಿ ನಾನು, ನನ್ನ ತಂಗಿ ಮತ್ತು ನನ್ನ ತಾಯಿ ತಕರಾರು ಮಾಡಿಲ್ಲ ಎಂದರೆ ಸಾಕ್ಷಿ ನಾವು ಚಿಕ್ಕವರಾಗಿರುವರುವುದರಿಂದ ನಮಗೆ ಏನೂ ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ಸಾತವೀರವ್ವ ಗಂಡ ಶಿವರಾಯ ಚಿಟಗಿರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆಯಿರಲಿಲ್ಲ ಆದರೆ ನಮಗೆ ಗೊತ್ತಾಗದಂತೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಅದೆ ರೀತಿ 1ನೆ ಪ್ರತಿವಾದಿ ನನ್ನ ಮದುವೆಗಾಗಿ 11-ಗುಂಟೆ ಜಮೀನನ್ನು 8ನೆ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2014 ರಲ್ಲಿ 1ನೆ ಪ್ರತಿವಾದಿ ತನ್ನ ಪ್ರಾಪಂಚಿಕ ಅಡಚೆಗಾಗಿ 20-ಗುಂಟೆ ಜಮೀನನ್ನು 6ನೆ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕ 18.02.2021 ರಂದು 1ನೆ ಪ್ರತಿವಾದಿ ತನ್ನ ಪ್ರಾಪಂಚಿಕ ಅಡಚೆಗಾಗಿ ಜ್ಯೋತಿ ಗಂಡ ರೇವಣಸಿದ್ದಪ್ಪರವರಿಗೆ 20-ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 18.02.2021 ರಂದು 1ನೆ ಪ್ರತಿವಾದಿ ತನ್ನ ಪ್ರಾಪಂಚಿಕ ಅಡಚೆಗಾಗಿ 4ನೆ ಪ್ರತಿವಾದಿಗೆ ರವರಿಗೆ 28-ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೆ ಪ್ರತಿವಾದಿಯು ತನ್ನ ಪ್ರಾಪಂಚಿಕ ಅಡಣೆಗಾಗಿ ಜಮೀನು ಮಾರಾಟ ಮಾಡಿರುವುದರಿಂದ ನನಗಾಗಲಿ, ನನ್ನ ಸಹೋದರಿಗಾಗಲಿ, ನನ್ನ ತಾಯಿಗಾಗಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1ನೆ ಪ್ರತಿವಾದಿಗೆ 3ನೆ ಪ್ರತಿವಾದಿಯೊಂದಿಗೆ ಕಾನೂನುಬದ್ಧ ಮದುವೆಯಾಗಿರುತ್ತಾರೆ ಎಂದರೆ ಇರಬಹುದು ಎಂದು ಹೇಳುತ್ತಾರೆ. ದಾವಾಸ್ತಿಗೆ 1, 4, 5ನೆ ಪ್ರತಿವಾದಿಯರು ಮಾತ್ರ ಹಕ್ಕುದಾರರು ಎಂದರೆ ಸರಿಯಲ್ಲ. ದಾವಾಸ್ತಿಯ ಮೌಲ್ಯ 10 ಲಕ್ಷಕ್ಕಿಂತ ಹೆಚ್ಚು ಇರುವುದರಿಂದ ದಾವೆಯು ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಒಟ್ಟು ಮೌಲ್ಯ ಎರಡು ಕೋಟಿಗಿಂತ ಹೆಚ್ಚು ಮೌಲ್ಯ ಆಗುತ್ತದೆ ಎಂದರೆ ಸರಿ. ನಾನು ಸರಿಯಾದ ನ್ಯಾಯಾಲಯದ ಶುಲ್ಕ ಭರಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಗೆ ಈಗಾಗಲೇ 1ನೆ ಪ್ರತಿವಾದಿ 03-ಎಕರೆ 12-ಗುಂಟೆ ಜಮೀನು ಉಪ ಜೀವನಕ್ಕಾಗಿ ಕೊಟ್ಟಿರುತ್ತಾರೆ ಎಂದರೆ ಸರಿ. 1, 3 ರಿಂದ 5ನೆ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ